

بسم اللهِ الرّحمٰن الرّحيم

# ಮಕ್ಕಾ ವಿಜಯದ ಕುರಿತು ವಿವರಣೆ ಮತ್ತು ಇರಾನ್ – ಇಸ್ರೇಲ್ ಸಂಘರ್ಷದ ಹಿನ್ನೆಲೆಯಲ್ಲಿ ದುಆ ಮಾಡಲು ಮನವಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **13–06–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕೆಲವು ಜುಮುಅಗಳಿಗೆ ಮುಂಚೆ ಮಕ್ಕಾ ವಿಜಯದ ಕುರಿತು ಆರಂಭಿಕ ಪ್ರಸ್ತಾಪ ಮಾಡಿದ್ದೆ. ಇಂದು ಅದರ ಕುರಿತು ಇನ್ನಷ್ಟು ವಿವರಗಳನ್ನು ನೀಡುತ್ತೇನೆ.

ಈ ಯುದ್ಧದ ಕಾರಣದ ಬಗ್ಗೆ ಹೇಳುವುದಾದರೆ, ಅದರ ತಕ್ಷಣದ ಕಾರಣವೇನೆಂದರೆ, ಹುದೈಬಿಯಾದಲ್ಲಿ ಮಾಡಿಕೊಂಡಿದ್ದ ಒಪ್ಪಂದವನ್ನು ಖುರೈಶಿಯರು ಮುರಿದರು ಹಾಗೂ "ಒಪ್ಪಂದವನ್ನು ಕೊನೆಗೊಳಿಸುತ್ತಿದ್ದೇವೆ ಮತ್ತು ನಾವು ಮುಹಮ್ಮದ್[ಸ]ರೊಂದಿಗೆ ಯುದ್ಧ ಮಾಡುತ್ತೇವೆ" ಎಂದು ಹಝ್ರತ್ ಪೈಗಂಬರ್[ಸ]ರ ದೂತನೊಡನೆ ಬಹಳ ಅಹಂಕಾರದಿಂದ ಅವರು ಹೇಳಿದರು. ಹಝ್ರತ್ ಪೈಗಂಬರ್[ಸ]ರಿಗೆ ಈ ಸುದ್ದಿ ತಲುಪಿದಾಗ, ಅವರು ಮಕ್ಕಾದತ್ತ ಹೊರಟರು.

ಅವರ ಒಪ್ಪಂದ ಭಂಗದ ವಿವರ ಹೀಗಿದೆ: ಹುದೈಬಿಯಾ ಸಂಧಿ ನಡೆದಾಗ, ಅರಬ್ ಗೋತ್ರಗಳಲ್ಲಿ ಇಷ್ಟವುಳ್ಳವರು ಹಝ್ರತ್ ಪೈಗಂಬರ್[ಸ]ರೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು ಮತ್ತು ಇಷ್ಟವುಳ್ಳವರು ಖುರೈಶಿಯರೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು ಎಂಬ ಒಂದು ಶರತ್ತು ಇತ್ತು. ಅದರಂತೆ, ಮಕ್ಕಾದ ಸುತ್ತಮುತ್ತ ವಾಸವಾಗಿದ್ದ ಬನೂ ಬಕರ್ ಮತ್ತು ಬನೂ ಖುಝಾಅ ಗೋತ್ರಗಳಲ್ಲಿ, ಬನೂ ಖುಝಾಅ ಗೋತ್ರ ಹಝ್ರತ್ ಪೈಗಂಬರ್[ಸ]ರೊಂದಿಗೆ ಒಪ್ಪಂದ ಮಾಡಿಕೊಂಡಿತು ಮತ್ತು ಅವರ ವಿರೋಧಿ ಗೋತ್ರವಾದ ಬನೂ ಬಕರ್ ಖುರೈಶಿಯರೊಂದಿಗೆ ಒಪ್ಪಂದ ಮಾಡಿಕೊಂಡಿತು. ಹೀಗೆ ಎರಡೂ ಗೋತ್ರಗಳು ಪರಸ್ಪರದ ಹೋರಾಟದಿಂದ ಮುಕ್ತವಾದವು. ಇಸ್ಲಾಮಿಗೆ ಮುಂಚೆ ಬನೂ ಖುಝಾಅ ಮತ್ತು ಬನೂ ಬಕರ್ ನಡುವೆ ಯುದ್ಧವಿತ್ತು. ಅದರಲ್ಲಿ ಬನೂ ಬಕರ್‌ನವರು ಒಬ್ಬ ಖುಝಾಅ ಗೋತ್ರದ ವ್ಯಕ್ತಿಯನ್ನು ಕೊಂದಿದ್ದರು ಹಾಗೂ ಬನೂ ಖುಝಾಅದವರು ಬನೂ ಬಕರ್ ಗೋತ್ರದ ಮೂರು ಜನರನ್ನು ಕಅಬದ ಸಮೀಪ ಕೊಂದಿದ್ದರು. ಬನೂ ಬಕರ್ ಗೋತ್ರ ಮತ್ತು ಬನೂ ಖುಝಾಅ ಗೋತ್ರದ ನಡುವೆ ಯುದ್ಧಗಳು ನಡೆಯುತ್ತಿದ್ದ ಕಾಲದಲ್ಲೇ ಹಝ್ರತ್ ಪೈಗಂಬರ್[ಸ] ಪ್ರವಾದಿಯಾಗಿ ನಿಯೋಜಿತಗೊಂಡರು. ಹೀಗೆ ಜನರು ಇಸ್ಲಾಮಿನ ಬಗ್ಗೆ ಮಾತನಾಡಲು ಆರಂಭಿಸಿದರು. ಒಂದು ಹೊಸ ವಿಷಯ ಅವರ ಮುಂದೆ ಬಂದ ಕಾರಣದಿಂದ ಅದರ ಬಗ್ಗೆ ಮಾತುಕತೆಗಳು ಶುರುವಾದುವು. ಹೀಗೆ ಉಭಯ ಗೋತ್ರಗಳು ಪರಸ್ಪರ ಯುದ್ಧ ಮಾಡುವುದರಿಂದ ಹಿಂದೆ ಸರಿದರು. ಆದರೆ ಅವರ ಹೃದಯಗಳಲ್ಲಿ ಕೋಪ ಮತ್ತು ದ್ವೇಷ ಅಡಗಿದ್ದುವು.

ಹಿಜರೀ 8ರ ಶಅಬಾನ್ ತಿಂಗಳಲ್ಲಿ ಹುದೈಬಿಯಾ ಒಪ್ಪಂದಕ್ಕೆ ಇಪ್ಪತ್ತೆರಡು ತಿಂಗಳುಗಳು ಕಳೆದಿದ್ದುವು. ಬನೂ ಬಕರ್‌ನ ಒಬ್ಬ ವ್ಯಕ್ತಿಯು ಹಝ್ರತ್ ಪೈಗಂಬರ್[ಸ]ರ ವಿರುದ್ಧ ಅವಹೇಳನಕಾರಿ ಕವನವನ್ನು ಹಾಡಿದನು. ಹಾಡುವುದನ್ನು ಕೇಳಿದ ಬನೂ ಖುಝಾಅದ ಒಬ್ಬ ಯುವಕ ಆ ವ್ಯಕ್ತಿಯ ತಲೆಗೆ ಹೊಡೆದು ಆತನನನ್ನು ಕೊಂದನು. ಈ ಘಟನೆಯಿಂದ ಎರಡೂ ಗೋತ್ರಗಳಲ್ಲಿ ಪುನಃ ಜಗಳ ಶುರುವಾಯಿತು. ಮೊದಲಿನಿಂದಲೂ ಉಭಯ ಗೋತ್ರಗಳ ನಡುವೆ ಹಗೆ ಇದ್ದ ಕಾರಣದಿಂದ ಅದು ಮತ್ತಷ್ಟು ಹೆಚ್ಚಾಯಿತು. ಆ ಅವಮಾನಕಾರಿ ಕವನಗಳನ್ನು ಬರೆದಿದ್ದ ವ್ಯಕ್ತಿಯು ಬನೂ ಬಕರ್‌ನ ಒಂದು ಕುಟುಂಬವಾದ ಬನೂ ನಫಾಸಾದ ಸದಸ್ಯನಾಗಿದ್ದನು. ಆ ಕವಿಯನ್ನು ಬನೂ ಖುಝಾಅದ ಒಬ್ಬ ಯುವಕ ಗಾಯಗೊಳಿಸಿದಾಗ, ಬನೂ ಬಕರ್ ಗೋತ್ರದ ಬನೂ ನಫಾಸಾ ಕುಟುಂಬದವರು ಖುರೈಶಿಯರಿಂದ ಬನೂ ಖುಝಾಅ ಗೋತ್ರದ ವಿರುದ್ಧ ಹೋರಾಡಲಿಕ್ಕಾಗಿ ವ್ಯಕ್ತಿಗಳ ಮತ್ತು ಆಯುಧಗಳ ನೆರವನ್ನು ಕೋರಿತು.

ಅಬೂ ಸುಫಿಯಾನ್ ಹೊರತುಪಡಿಸಿ, ಖುರೈಶಿಯರ ಉಳಿದವರು ಅವರಿಗೆ ಸಹಾಯ ಮಾಡಲು ಒಪ್ಪಿಕೊಂಡರು. ಅಬೂ ಸುಫಿಯಾನ್ ಈ ಸಲಹೆಯನ್ನೂ ನೀಡಿರಲಿಲ್ಲ ಮತ್ತು ಅವರಿಗೆ ಇದರ ಅರಿವೂ ಇದ್ದಿರಲಿಲ್ಲ. ಮತ್ತೊಂದು ವರದಿಯಲ್ಲಿ ಅವರೊಂದಿಗೆ ಈ ಕುರಿತು ಸಮಾಲೋಚಿಸಲಾಗಿತ್ತು, ಆದರೆ ಅವರು ಯುದ್ಧ ಮಾಡುವುದನ್ನು ನಿರಾಕರಿಸಿದರು ಎಂದೂ ಹೇಳಲಾಗುತ್ತದೆ. ಆದರೂ ಖುರೈಶಿಯರು ಆಯುಧಗಳು, ಕುದುರೆಗಳು ಮತ್ತು ಸೈನಿಕರೊಂದಿಗೆ ಆ ಗೋತ್ರಕ್ಕೆ ಸಹಾಯ ಮಾಡಿದರು. ಬನೂ ಖುಝಾಅ ಗೋತ್ರದವರಿಗೆ ಸ್ವತಃ ರಕ್ಷಣೆ ಪಡೆಯಲು ಸಾಧ್ಯವಾಗದೇ ಇರಲಿಕ್ಕಾಗಿ ಅವರೆಲ್ಲರೂ ರಹಸ್ಯವಾಗಿ ದಾಳಿ ಮಾಡಿದರು. ಆ ಕಡೆ ಬನೂ ಖುಝಾಅ ಗೋತ್ರದವರು ಒಪ್ಪಂದದ ಕಾರಣದಿಂದ ತಮ್ಮನ್ನು ಸ್ವತಃ ಸುರಕ್ಷಿತರೆಂದು ಭಾವಿಸಿದ್ದರು ಮತ್ತು ದಾಳಿಯ ಬಗ್ಗೆ ಅಲಕ್ಷ್ಯರಾಗಿದ್ದರು. ವತೀರ್ ಎಂಬ ಸ್ಥಳದಲ್ಲಿ ಭೇಟಿಯಾಗಲು ಖುರೈಶಿಯರು, ಬನೂ ಬಕರ್ ಮತ್ತು ಬನೂ ನಫಾಸಾ ಒಪ್ಪಿಕೊಂಡರು. ಇದು ಮಕ್ಕಾದ ತಗ್ಗು ಪ್ರದೇಶವಾಗಿತ್ತು. ಬನೂ ಖುಝಾಅ ಗೋತ್ರದ ಮನೆಗಳು ಇದೇ ಸ್ಥಳದಲ್ಲಿದ್ದವು. ವಿರೋಧಿ ಗುಂಪಿನವರು ನಿಗದಿತ ಸಮಯದಲ್ಲಿ ಅಲ್ಲಿ ಭೇಟಿಯಾದರು. ಖುರೈಶಿಯರ ಮುಖಂಡರು ವೇಷ ಬದಲಾಯಿಸಿಕೊಂಡಿದ್ದರು ಮತ್ತು ಮುಸುಕು ಹಾಕಿಕೊಂಡಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್[ರ] ಸಹ ಐತಿಹಾಸಿಕ ದೃಷ್ಟಿಕೋನದಿಂದ ಇದನ್ನು ವಿವರಿಸಿದ್ದಾರೆ. ಅವರು ಹೀಗೆ ಬರೆದಿದ್ದಾರೆ: ಹೇಗಾದರೂ ಮುಸ್ಲಿಮರನ್ನು ದಾಳಿಯಿಂದ ತಡೆಯಲಿಕ್ಕಾಗಿ ಮಕ್ಕಾದವರು ಅಬೂ ಸುಫಿಯಾನ್‌ರನ್ನು ಮದೀನಾಕ್ಕೆ ಕಳುಹಿಸಿದರು. ಹುದೈಬಿಯಾ ಸಂಧಿಯ ವೇಳೆ ತಾನು ಅಲ್ಲಿ ಇರದಿದ್ದ ಕಾರಣದಿಂದ ಹೊಸದಾಗಿ ಒಪ್ಪಂದ ಮಾಡಿಕೊಳ್ಳಬೇಕು ಎಂದು ಅಬೂ ಸುಫಿಯಾನ್ ಮದೀನಾಕ್ಕೆ ತಲುಪಿ ಹಝ್ರತ್ ಪೈಗಂಬರ್[ಸ]ರ ಮೇಲೆ ಒತ್ತಡ ಹಾಕಲು ಪ್ರಾರಂಭಿಸಿದರು. ಆದರೆ ಅವರ ಮಾತಿಗೆ ಹಝ್ರತ್ ಪೈಗಂಬರ್[ಸ] ಯಾವುದೇ ಉತ್ತರ ನೀಡಲಿಲ್ಲ. ಏಕೆಂದರೆ ಉತ್ತರಿಸುವುದರಿಂದ ರಹಸ್ಯಗಳು ಬಯಲಾಗುವ ಸಾಧ್ಯತೆಯಿತ್ತು. ಅಬೂ ಸುಫಿಯಾನ್ ಹತಾಶೆಯ ಸ್ಥಿತಿಯಲ್ಲಿ ಗಾಬರಿಗೊಂಡು ಮಸೀದಿಯಲ್ಲಿ ನಿಂತು ಹೀಗೆ ಘೋಷಿಸಿದನು: "ಎಲೈ ಜನರೇ, ನಾನು ಮಕ್ಕಾದವರ ಪರವಾಗಿ ನಿಮ್ಮೆಲ್ಲರಿಗಾಗಿ ಹೊಸದಾಗಿ ಶಾಂತಿಯನ್ನು ಘೋಷಿಸುತ್ತೇನೆ." ಈ ಮಾತು ಕೇಳಿ ಮುಸ್ಲಿಮರು ಅವರ ಮೂರ್ಖತನಕ್ಕೆ ನಕ್ಕರು. ಹಝ್ರತ್ ಪೈಗಂಬರ್[ಸ] ಹೇಳಿದರು: "ಎಲೈ ಅಬೂ ಸುಫಿಯಾನ್, ಈ ಮಾತನ್ನು ನೀನು ಏಕಪಕ್ಷೀಯವಾಗಿ ಹೇಳುತ್ತಿದ್ದೀಯಾ, ನಾವು ನಿನ್ನೊಂದಿಗೆ ಯಾವುದೇ ಅಂತಹ ಒಪ್ಪಂದ ಮಾಡಿಕೊಂಡಿಲ್ಲ."

ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್[ರ] ತಮ್ಮದಾದ ಶೈಲಿಯಲ್ಲಿ ಹೀಗೆ ಬರೆಯುತ್ತಾರೆ: ಹಝ್ರತ್ ಮೈಮೂನಾ[ರ] ಹೇಳುತ್ತಾರೆ: ಒಂದು ರಾತ್ರಿ ನನ್ನ ಸರದಿಯಲ್ಲಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನನ್ನ ಮನೆಯಲ್ಲಿ ಮಲಗಿದ್ದರು. ಅವರು ತಹಜ್ಜುದ್‌ಗಾಗಿ ಎದ್ದಾಗ, ವುಝೂ ಮಾಡುತ್ತಾ ಅವರು **ಲಬ್ಬೈಕ್ ಲಬ್ಬೈಕ್ ಲಬ್ಬೈಕ್** (ನಾನು ಸಿದ್ಧನಿದ್ದೇನೆ, ನಾನು ಸನ್ನದ್ಧನಾಗಿದ್ದೇನೆ, ನಾನು ತಯಾರಿದ್ದೇನೆ) ಎಂದು ಹೇಳುತ್ತಿರುವುದು ನನಗೆ ಕೇಳಿಸಿತು. ಅನಂತರ ಅವರು **ನುಸ್ರತ್ ನುಸ್ರತ್ ನುಸ್ರತ್** (ಸಹಾಯ, ಸಹಾಯ, ಸಹಾಯ) ಎಂದು ಹೇಳಿದರು. ಅವರು ಹೊರಗೆ ಬಂದಾಗ ನಾನು ಕೇಳಿದೆ: ಯಾ ರಸೂಲುಲ್ಲಾಹ್, ಯಾರಾದರೂ ಬಂದಿದ್ದರೇ? ನೀವು ಅವರೊಂದಿಗೆ ಮಾತನಾಡುತ್ತಿದ್ದೀರಾ? ಹಝ್ರತ್ ಪೈಗಂಬರ್[ಸ] ಹೇಳಿದರು: "ಹೌದು, ನನ್ನ ಮುಂದೆ ಆತ್ಮಿಕ ದರ್ಶನ ರೂಪದಲ್ಲಿ ಖುಝಾಅ ಗೋತ್ರದ ಒಂದು ನಿಯೋಗವು ಹಾಜರಾಯಿತು ಮತ್ತು ಅವರು ಉಚ್ಚಸ್ವರದಲ್ಲಿ ಹೀಗೆ ಹೇಳುತ್ತಿದ್ದರು: ನಾವು ಮುಹಮ್ಮದ್‌ರಿಗೆ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಅವರ ದೇವನ ಆಣೆ ಹಾಕಿ ಹೇಳುತ್ತೇವೆ, ನಿಮ್ಮೊಂದಿಗೆ ಮತ್ತು ನಿಮ್ಮ ಪೂರ್ವಜರೊಂದಿಗೆ ನಾವು ಒಪ್ಪಂದಗಳನ್ನು ಮಾಡಿಕೊಂಡಿದ್ದೆವು. ನಾವು ನಿಮಗೆ ಸಹಾಯ ಮಾಡುತ್ತಾ ಬಂದಿದ್ದೇವೆ. ಆದರೆ ಖುರೈಶಿಯರು ನಮ್ಮೊಂದಿಗೆ ಮಾಡಿದ ಒಪ್ಪಂದವನ್ನು ಮುರಿದಿರುವರು ಮತ್ತು ರಾತ್ರಿ ಸಮಯದಲ್ಲಿ ನಮ್ಮ ಮೇಲೆ ದಾಳಿ ಮಾಡಿ, ನಮ್ಮಲ್ಲಿ ಕೆಲವರು ಸಜ್‌ದದಲ್ಲಿದ್ದಾಗ ಮತ್ತು ಕೆಲವರು ರುಕೂವಿನಲ್ಲಿದ್ದಾಗ ನಮ್ಮನ್ನು ಕೊಂದರು. ಈಗ ನಾವು ನಿಮ್ಮ ಸಹಾಯ ಪಡೆಯಲು ಬಂದಿದ್ದೇವೆ. ಹಝ್ರತ್ ಪೈಗಂಬರ್[ಸ] ಹೇಳಿದರು: ಖುಝಾಅದ ವ್ಯಕ್ತಿಯೊಬ್ಬರು ನಿಂತಿದ್ದಾಗಿ ನಾನು ನೋಡಿದೆ. ದರ್ಶನ ರೂಪದಲ್ಲಿ ಆ ವ್ಯಕ್ತಿಯನ್ನು ನಾನು ಕಂಡಾಗ, ನಾನು **ಲಬ್ಬೈಕ್ ಲಬ್ಬೈಕ್ ಲಬ್ಬೈಕ್** ಎಂದು ಹೇಳಿದೆ. ಅಂದರೆ, ನಾನು ನಿಮ್ಮ ಸಹಾಯಕ್ಕಾಗಿ ಹಾಜರಿದ್ದೇನೆ ಎಂದು ಮೂರು ಬಾರಿ ಹೇಳಿದೆ. ನಂತರ **ನುಸ್ರತ್ ನುಸ್ರತ್ ನುಸ್ರತ್** ಎಂದು ಹೇಳಿದೆ. ಅಂದರೆ ನಿಮಗೆ ಸಹಾಯ ಸಿಗುತ್ತದೆ ಎಂದು ಮೂರು ಬಾರಿ ಹೇಳಿದೆ."

ಹಝ್ರತ್ ಆಯಿಶ[ರ] ಹೇಳುತ್ತಾರೆ: "ಅದೇ ದಿನ ಬೆಳಿಗ್ಗೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ನನ್ನ ಮನೆಗೆ ಬಂದರು ಮತ್ತು ಖುಝಾಅ ಗೋತ್ರದೊಂದಿಗೆ ಒಂದು ಅಪಾಯಕಾರಿ ಘಟನೆ ನಡೆದಿದೆ ಎಂದು ಹೇಳಿದರು." ಹಝ್ರತ್ ಆಯಿಶ[ರ] ಹೇಳುತ್ತಾರೆ: "ಖುಝಾಅದೊಂದಿಗೆ ಅಪಾಯಕಾರಿ ಘಟನೆ ಎಂದರೆ ಅವರು ಮಕ್ಕಾದ ಗಡಿಯಲ್ಲಿದ್ದಾರೆ ಹಾಗೂ ಬನೂ ಬಕರ್ ಗೋತ್ರದೊಂದಿಗೆ ಒಪ್ಪಂದ ಮಾಡಿಕೊಂಡಿರುವ ಮಕ್ಕಾದವರು ಖುಝಾಅದ ಮೇಲೆ ದಾಳಿ ಮಾಡಿರಬಹುದು ಎಂದು ನಾನು ಅರ್ಥಮಾಡಿಕೊಂಡೆ. ನಾನು ಕೇಳಿದೆ: 'ಯಾ ರಸೂಲುಲ್ಲಾಹ್, ಇಷ್ಟು ಪ್ರತಿಜ್ಞೆಗಳ ನಂತರ ಖುರೈಶಿಯರು ಒಪ್ಪಂದವನ್ನು ಮುರಿದು ಖುಝಾಅದ ಮೇಲೆ ದಾಳಿ ಮಾಡಲು ಸಾಧ್ಯವೇ? ಹಝ್ರತ್ ಪೈಗಂಬರ್[ಸ] ಹೇಳಿದರು: 'ಹೌದು, ಅಲ್ಲಾಹನ ಯೋಜನೆಯ ಅನುಸಾರ ಅವರು ಈ ಒಪ್ಪಂದವನ್ನು ಮುರಿಯುತ್ತಿದ್ದಾರೆ.' ಇದರಲ್ಲಿ ಇರುವ ಯುಕ್ತಿಯ ಸಂಗತಿಯೇನೆಂದರೆ, ಹಝ್ರತ್ ಪೈಗಂಬರ್[ಸ]ರಿಗೆ ದಾಳಿ ಮಾಡಲು ಅನುಮತಿ ಇದ್ದಿರಲಿಲ್ಲ. ಆದರೆ ಒಪ್ಪಂದ ಮುರಿದು ಹೋದಾಗ ಅನುಮತಿ ಲಭಿಸಿದಂತಾಯಿತು." ಹಝ್ರತ್ ಆಯಿಶ[ರ] ಹೇಳುತ್ತಾರೆ: "ನಾನು ಕೇಳಿದೆ, ಯಾ ರಸೂಲುಲ್ಲಾಹ್, ಇದರ ಫಲಿತಾಂಶ ಒಳ್ಳೆಯದಾಗುವುದೇ?'" ಹಝ್ರತ್ ಪೈಗಂಬರ್[ಸ] ಹೇಳಿದರು: **"ಹೌದು, ಇದರ ಫಲಿತಾಂಶ ಒಳ್ಳೆಯದಾಗಿರುವುದು."**

ಈ ವಿಷಯ ಮುಂದುವರಿಯಲಿದೆ. ಇನ್‌ಶಾ ಅಲ್ಲಾಹ್.

(ಇತ್ತೀಚಿನ ಇರಾನ್–ಇಸ್ರೇಲ್ ಸಂಘರ್ಷದ ಹಿನ್ನೆಲೆಯಲ್ಲಿ ದುಆ ಮಾಡಲು ಮನವಿ ಮಾಡುತ್ತಾ ಹುಝೂರ್ ಹೇಳಿದರು:) ಈಗ ನಾನು ಲೋಕದ ಪ್ರಚಲಿತ ಪರಿಸ್ಥಿತಿಗಳ ಕುರಿತು ಹೇಳಲು ಬಯಸುತ್ತೇನೆ. ದುಆ ಮಾಡಲು ಸಾಮಾನ್ಯವಾಗಿ ಹೇಳುತ್ತಿರುತ್ತೇನೆ. ಯುದ್ಧವು ಹರಡುವ ಸಾಧ್ಯತೆಗಳು ಹೆಚ್ಚುತ್ತಲೇ ಇವೆ. ಅಲ್ಲಾಹನು ನಮ್ಮನ್ನು ಅದರ ವಿನಾಶದಿಂದ ಸುರಕ್ಷಿತವಾಗಿರಿಸಲಿ ಎಂದು ಅಲ್ಲಾಹನೊಡನೆ ದುಆ ಮಾಡಿರಿ. ಏಕೆಂದರೆ ಈಗ ಇಸ್ರೇಲ್ ಇರಾನ್ ಮೇಲೆ ದಾಳಿ ಮಾಡಿದೆ ಮತ್ತು ಈ ಯುದ್ಧದ ಸ್ಥಿತಿಯು ಅಪಾಯಕಾರಿ ರೂಪವನ್ನು ಪಡೆದುಕೊಂಡಿದೆ.

ಒಂದೊಂದಾಗಿ ಎಲ್ಲ ಮುಸ್ಲಿಂ ದೇಶಗಳಿಗೆ ಹಾನಿ ಮಾಡಬೇಕು ಎಂದೇ ಇಸ್ರೇಲ್ ಸರ್ಕಾರ ಬಯಸುತ್ತಿದೆ. ಆದರೆ ಮುಸ್ಲಿಂ ದೇಶಗಳು ನಿದ್ರಿಸುತ್ತಿವೆ. ತಮ್ಮ ಸ್ವಂತ ಪ್ರಗತಿ ಮತ್ತು ತಮ್ಮ ಇತರ ಆದ್ಯತೆಗಳಲ್ಲಿ ಮುಳುಗಿವೆ. ಇನ್ನೇನು ಆಗಲಿದೆ ಎಂಬುದರ ಅರಿವು ಅವರಿಗಿಲ್ಲ.

ಮುಸ್ಲಿಮರ ಬಳಿ ಸತ್ಕರ್ಮಗಳೂ ಇಲ್ಲ, ದುಆದ ಕುರಿತು ಗಮನವೂ ಇಲ್ಲ. ಇಂತಹ ಸ್ಥಿತಿಯಲ್ಲಿ ಉಂಟಾಗಬಹುದಾದ ಹಾನಿಯ ಬಗ್ಗೆ ಊಹಿಸಲು ಕೂಡ ಸಾಧ್ಯವಿಲ್ಲ. ಅಲ್ಲಾಹನು

ಅವರಿಗೆ ಬುದ್ಧಿ ನೀಡಲಿ, ಅವರು ಈ ಬಗ್ಗೆ ಗಮನಹರಿಸಿಕೊಂಡು ಒಗ್ಗಟ್ಟಾಗಿರಲು ಪ್ರಯತ್ನಿಸುವಂತಾಗಲಿ.

ಅವರು ಆ ಪಂಗಡದವರು ಇವರು ಈ ಪಂಗಡದವರು ಎಂದು ಹೇಳಿಕೊಂಡು ಪರಸ್ಪರ ಸಹಾಯ ಮಾಡದೇ ಇರುವುದು ಸರಿಯಲ್ಲ. ಎಲ್ಲ ದೇಶಗಳು ಅಪಾಯದಲ್ಲಿವೆ, ಏಕೆಂದರೆ **ಅಲ್ ಕುಫ್ರು ಮಿಲ್ಲತುನ್ ವಾಹಿದ** – ಅವಿಶ್ವಾಸಿಗಳು ಒಂದೇ ಜನಾಂಗ ಆಗಿಬಿಟ್ಟಿದೆ. ಈಗ ಮುಸ್ಲಿಮರು ಕೂಡ **ಉಮ್ಮತೇ ವಾಹಿದ** – ಒಂದೇ ಸಮುದಾಯ ಆಗಬೇಕಾಗಿದೆ. ಆಗ ಮಾತ್ರ ಪಾರಾಗುವರು. ಇದಲ್ಲದೆ ಬೇರೆ ದಾರಿಯಿಲ್ಲ. ಅಲ್ಲಾಹನು ಎಲ್ಲ ಅಮಾಯಕರನ್ನು, ಪೀಡಿತರನ್ನು ದೊಡ್ಡ ನಷ್ಟದಿಂದ ರಕ್ಷಿಸಲಿ. ನಾವು ಪ್ರಾರ್ಥನೆಗಳ ಕಡೆಗೆ ಹೆಚ್ಚು ಗಮನ ಹರಿಸಬೇಕು. ಅಲ್ಲಾಹನು ನಮಗೆ ಅದರ ಸೌಭಾಗ್ಯ ಕರುಣಿಸಲಿ.

*****

اَلْحَمْدُلِلّٰهِ نَحْمَدُهُ وَنَسْتَعِيْنُهُ وَنَسْتَغْفِرُهُ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak',*** *Islamabad, Tilford,* U.K. On 13-06-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon